(6)

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2014-15ನೇ ಸಾಲಿನ ರಾಸಾಯನಿಕ ಗೊಬ್ಬರದ ತಾತ್ಕಾಲಿಕ ಸಂಗ್ರಹಕ್ಕಾಗಿ ಸಹಾಯಧನ ಯೋಜನೆಯಡಿ ರಸಗೊಬ್ಬರಗಳನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿಯ ಗೊದಾಮುಗಳಿಂದ ಸಹಕಾರ ಸಂಘಗಳಿಗೆ ಸಾಗಾಣಿಕೆ ಮಾಡಿದಾಗ ತಗಲುವ ಹೆಚ್ಚುವರಿ ಸಾಗಾಣಿಕೆ ವೆಚ್ಚ ಪಾವತಿಸುವ ಕುರಿತು.

ಓದಲಾಗಿದೆ:- 1) ಸರ್ಕಾರದ ಆದೇಶ ಸಂಖ್ಯೆ: ಕೃಇ/45/ಕೃಯೋಕಾ/2014, ಬೆಂಗಳೂರು ದಿನಾಂಕ: 11-04-2014.

2) ಸರ್ಕಾರದ ಆದೇಶ ಸಂಖ್ಯೆ: ಕೃಇ/93/ಕೃರಾಗೊ/2014, ಬೆಂಗಳೂರು ದಿನಾಂಕ: 20-06-2014.

3) ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸ.ಮಾ..ಮ.ಮಂಇವರ ಪತ್ರ ಸಂಖ್ಯೆ:ವ್ಯ.ಬ /2014-15/3.ದಿನಾಂಕ:07-04-2014

4) ಕೃಷಿ ಆಯುಕ್ತರವರ ಪತ್ರ ಸಂ:ರಾಗೋವಿ/ಕಾದಾ/ಸಾ.ವೆಚ್ಚ/2014-15. ದಿ: 19-05-2014.

5) ದಿನಾಂಕ: 07-06-2012 ರಂದು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

6) ದಿನಾಂಕ:19-4-2013 ಮತ್ತು 06-06-2013 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

******

**<u>ಪ್ರಸ್ತಾವನೆ:-</u>**

ಉಲ್ಲೇಖ (1) ರಲ್ಲಿ ಓದಲಾದ ದಿನಾಂಕ:11-04-2014ರ ಸರ್ಕಾರದ ಆದೇಶದಲ್ಲಿ " ರಾಸಾಯನಿಕ ಗೊಬ್ಬರದ ಮೇಲಿನ ಬಡ್ಡಿ ಸಹಾಯಧನ" ಯೋಜನೆಯನ್ನು ಬೀಜಗಳ ಪೂರೈಕೆ ಇತರೆ ಹೂಡುವಳಿ ಯೋಜನೆ" ಲೆಕ್ಕ ಶೀರ್ಷಿಕೆ:2401-00-103-0-15 (ಯೋಜನೆ) ರಡಿ 2014-15ನೇ ಸಾಲಿನ ಚಾಲ್ತಿಯೋಜನೆಯಾಗಿ ಮುಂದುವರೆಸಲಾಗಿರುತ್ತದೆ. ಸಾಗಾಣಿಕೆ ವೆಚ್ಚವು ಯೋಜನೆಯಡಿ ಒಂದು ಘಟಕವಾಗಿರುತ್ತದೆ. ಪ್ರಸ್ತುತ ಆಯವ್ಯಯದಲ್ಲಿ ಈ ಯೋಜನೆಗೆ ರೂ.9600.00ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

ಉಲ್ಲೇಖ(2)ರಲ್ಲಿ ಓದಲಾದ ದಿನಾಂಕ:20-06-2014ರ ಸರ್ಕಾರದ ಆದೇಶದಲ್ಲಿ ಸಾಗಾಣಿಕಾ ವೆಚ್ಚಕ್ಕಾಗಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ಸಂಸ್ಥೆಗೆ ಪಾವತಿಸಲು ಮಂಜೂರಾತಿ ನೀಡಲಾಗಿದೆ.

ಉಲ್ಲೇಖ(3)ರಲ್ಲಿ ಓದಲಾದ ದಿನಾಂಕ:27-04-2014ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ಇವರು ಮಹಾಮಂಡಳದ ಗೋದಾಮುಗಳಲ್ಲಿ ಶೇಖರಿಸಿದ ರಸಗೊಬ್ಬರವನ್ನು ಸಹಕಾರ ಸಂಘಗಳು ಸಾಗಣೆ ಮಾಡಿಕೊಳ್ಳಲು ಸಾಗಣೆ ವೆಚ್ಚದ ರಿಯಾಯಿತಿ ಸೌಲಭ್ಯವನ್ನು 2013-14ನೇ ಸಾಲಿನಲ್ಲಿ ನೀಡಿದ್ದು, ಸದರಿ ಸೌಲಭ್ಯವು ದಿನಾಂಕ:31-03-2014ಕ್ಕೆ ಮುಕ್ತಾಯವಾಗಿರುತ್ತದೆ. ಆದ್ದರಿಂದ ಸದರಿ ಸೌಲಭ್ಯವನ್ನು 2014-15ನೇ ಸಾಲಿಗೂ ಸಹ ಮುಂದುವರೆಸುವಂತೆ ಕೋರಿರುತ್ತಾರೆ.

..2

ಉಲ್ಲೇಖ(4) ರಲ್ಲಿ ಓದಲಾದ ದಿನಾಂಕ:19-5-2014ರ ಕೃಷಿ ಆಯುಕ್ತರ ಪತ್ರದಲ್ಲಿ ಕರ್ನಾಟಕ ( ಸಹಕಾರ ಮಾರಾಟ ಮಹಾ ಮಂಡಳದ ವತಿಯಿಂದ ಗುರುತಿಸಲ್ಪಟ್ಟ ದಾಸ್ತಾನು ಕೇಂದ್ರಗಳಿಂದ ರಸಗೊಬ್ಬರಗ ಸಹಕಾರ ಸಂಘಗಳಿಗೆ ಸಾಗಾಣಿಕೆ ಮಾಡಿದ ಸಂಧರ್ಭದಲ್ಲಿ ಹೆಚ್ಚುವರಿ ಸಾಗಾಣಿಕೆ ವೆಚ್ಚವನ್ನು ಭರಿಸಬೇ ಅನಿವಾರ್ಯತೆ ಉಂಟಾಗುತ್ತಿದ್ದು, ಕೆಲವೊಮ್ಮೆ ರಸಗೊಬ್ಬರಗಳನ್ನು ಗರಿಷ್ಟ ಮಾರಾಟ ಮಿತಿ ( ಎಂ.ಆರ್.ಪಿ)ಯೆ ರೈತರಿಗೆ ಪೂರೈಸುವುದು ಕಷ್ಟವಾಗುತ್ತಿದ್ದರಿಂದ, ಉಲ್ಲೇಖ (5)ರ ನಡವಳಿಯನ್ವಯ 2013-14ನೇ ಸಾಲಿಗೆ ಮ ಮಂಡಳದ ಗೋದಾಮುಗಳಿಂದ, ಸಹಕಾರ ಸಂಘಗಳಿಗೆ ಸಾಗಾಣಿಕೆ ಮಾಡಿದಾಗ ತಗಲುವ ಹೆಚ್ಚುವರಿ ವೆಚ್ಚ Slab Wise ದರದ ಅನ್ವಯ ಸರ್ಕಾರವೇ ಭರಿಸುತ್ತಿದೆ. ಆದ್ದರಿಂದ, ಸದರಿ ರಿಯಾಯಿತಿ ಸೌಲಭ್ಯವನ್ನು 20 15ನೇ ಸಾಲಿಗೂ ಮುಂದುವರೆಸಿ ಕಾಪು ದಾಸ್ತಾನು ಯೋಜನೆಯಡಿ ಸಂಗ್ರಹಿಸಿರುವ ರಸಗೊಬ್ಬರಗಳ ಪ್ರಮಾ ಮಾತ್ರ ಅನ್ವಯವಾಗುವಂತೆ ಪಾವತಿಸಲು ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೇಲೆ ತಿಳಿಸಿದ ಪ್ರಸ್ತಾವನೆಯನ್ನು ಕೂಲಂಕೂಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿ

**ಸರ್ಕಾರಿ ಆದೇಶ ಸಂಖ್ಯೆ: ಕೃಇ/92/ಕೃರಾಗೊ/2014,ಬೆಂಗಳೂರು ದಿ:06-09-2014.**

2014-15ನೇ ಸಾಲಿನಲ್ಲಿ ಕರ್ನಾಟಕ ಸಹಕಾರ ಮಾರಾಟ ಮಹಾ ಮಂಡಳಿಯ ವತಿಯ ಕಾಪುದಾಸ್ತಾನಿನಡಿ ಶೇಖರಿಸಲಾದ ರಸಗೊಬ್ಬರವನ್ನು ಸಹಕಾರ ಸಂಘಗಳು ಸಾಗಣೆ ಮಾಡಿಕೊಳ್ಳಲು ತ ಹೆಚ್ಚುವರಿ ವೆಚ್ಚವನ್ನು ತ್ರೈಮಾಸಿಕವಾರು ಲೆಕ್ಕ ಶೀರ್ಷಿಕೆ:2401-00-103-0-15ರಡಿ ಬಿಡುಗಡೆಯ ಅನುದಾನದಲ್ಲಿ ರಸಗೊಬ್ಬರಗಳನ್ನು ಗರಿಷ್ಟ ಮಾರಾಟ ಮಿತಿ (ಎಂ.ಆರ್.ಪಿ) ಯೊಳಗೆ, ರೈತರಿಗೆ ಪೂರೈಕೆ ಮಾ ಅನುಕೂಲವಾಗುವಂತೆ, ಕಾಪು ದಾಸ್ತಾನು ಯೋಜನೆಯಡಿ ಸಂಗ್ರಹಿಸಿರುವ ರಸಗೊಬ್ಬರಗಳ ಪ್ರಮಾಣಕ್ಕೆ ಮ ಅನ್ವಯವಾಗುವಂತೆ ಈ ಕೆಳಕಂಡ Slab Wise ದರವನ್ನು ಪಾವತಿಸಲು ಆದೇಶಿಸಿದೆ.

| ಕ್ರಮ ಸಂಖ್ಯೆ | ದೂರ ಕಿ.ಮಿಗಳಲ್ಲಿ | ಪಾವತಿಸಲಾಗುವ ಸಾಗಾಣಿಕೆ ವೆಚ್ಚ (ಪ್ರತಿ ಟನ್ ಗೆ ರೂ.ಗಳಲ್ಲಿ) |
|---|---|---|
| 1 | 0-15 | 144 |
| 2 | 16-25 | 210 |
| 3 | 26-50 | 280 |
| 4 | 51-75 | 359 |
| 5 | 76-100 | 415 |
| 6 | 101-150 | 541 |
| 7 | 151-200 | 614 |

ಈ ಮೇಲ್ಕಂಡ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ:ಆಇ/290/ವೆಚ್ಚ-4/2014. ದಿನಾಂಕ:12-08-2014ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜ್ಯೋತಿ.ಆರ್.ಜೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ & ಆರ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (ಎ&ಇ) ಕಬ್ಬನ್ ಪಾರ್ಕ ಹೌಸ್ ರಸ್ತೆ, ಬೆಂಗಳೂರು-01.
4. ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ರವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ.
8. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ನಿಯಮಿತ, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು-2.
10. ಸಹಕಾರ ಸಂಘಗಳ ನಿಬಂಧಕರು, ನಂ-1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52.
11. ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ & ಮಾರಾಟ), ನಂ-1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52.
12. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
13. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
14. ಸರ್ಕಾರದ ಅಧೀನ ಕಾರ್ಯದರ್ಶಿ,(ವೆಚ್ಚ-4 & 5) ಆರ್ಥಿಕ ಇಲಾಖೆ, ಬೆಂಗಳೂರು.
15. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ & ತೋಟಗಾರಿಕೆ ಇಲಾಖೆ
16. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.